O.S. No.- 262/2021
PW-1

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಕಾರಟಗಿ
(ಸಂಚಾರಿ ನ್ಯಾಯಾಲಯ) ಕಾರಟಗಿ .
ಸಾಕ್ಷಿಯನ್ನು ದಿನಾಂಕ- **29.01.2024** ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.

ಮುಂದುವರೆದ ಪಾಟೀಸವಾಲು- ಶ್ರೀ ಆರ್ ಬಿ ಕೆ ಪ್ರತಿವಾದಿಯರ ಪರ ವಕೀಲರಿಂದ-

4. ದಾವಾ ಆಸ್ತಿ ಮೊದಲು ನನ್ನ ಮಾವನಾದ ದೊಡ್ಡ ಮುದುಕಪ್ಪ ಅವರ ಹೆಸರಿನಲ್ಲಿ ಇತ್ತು. ಈಗ ಅವರು ಮರಣಹೊಂದಿರುತ್ತಾರೆ. ಅವರು ಎಷ್ಟು ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ ಎಂದು ಗೊತ್ತಿಲ್ಲ. ದಿನಾಂಕ 03.02.2015 ರಂದು ಅವರು ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ನಾನು ಮದುವೆ ಆಗಿ ಬರುವ ಮೊದಲು ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮದುವೆ ಸನ್ 2014 ರಲ್ಲಿ ಆಗಿರುತ್ತದೆ. ಸದರಿ ಮುದುಕಪ್ಪ ಅವರಿಗೆ ಸಣ್ಣ ಮುದುಕಪ್ಪ ಎಂಬ ಹೆಸರಿನ ಮಗ ಇರುತ್ತಾನೆ. ಸದರಿ ಸಣ್ಣ ಮುದುಕಪ್ಪನಿಗೆ ರಂಗಪ್ಪ ಎಂದೂ ಸಹ ಕರೆಯುತ್ತಾರೆ. ಸದರಿ ಸಣ್ಣ ಮುದುಕಪ್ಪನಿಗೆ ಆರು ಜನ ಮಕ್ಕಳಿರುತ್ತಾರೆ. ಅವರ ಹೆಂಡತಿ ಜೀವಂತವಾಗಿರುತ್ತಾಳೆ. ಆದ್ದರಿಂದ ಸದರಿ ಸಣ್ಣ ಮುದುಕಪ್ಪನಿಗೆ ಒಟ್ಟು ಏಳು ಜನ ವಾರಸುದಾರರು ಎಂದರೆ ನಿಜ. ಹೇಗೆ ದಾವಾ ಆಸ್ತಿ ನಿಮ್ಮ ಹೆಸರಿನಲ್ಲಿ ಬಂದಿರುತ್ತದೆ ಎಂದರೆ ಸಾಕ್ಷಿಯು ನನ್ನ ಮಾವ ದೊಡ್ಡ ಮುದುಕಪ್ಪ ಸಾಯುವಾಗ ನನ್ನ ಗಂಡನಿಗೆ ರಂಗಪ್ಪ ಎಂದು ಹೆಸರಿಟ್ಟಿದ್ದು, ಆದ್ದರಿಂದ ಆಸ್ತಿಯನ್ನು ರಂಗಪ್ಪನ ಹೆಂಡತಿಯಾದ ನನ್ನ ಹೆಸರಿನಲ್ಲಿ ಬಿಟ್ಟುಕೊಡಬೇಕು ಎಂದು ಸಣ್ಣ ಮುದುಕಪ್ಪನ ಹೆಂಡತಿ ಮಕ್ಕಳಿಗೆ ಹಾಗೂ ಮೊಮ್ಮಕ್ಕಳಿಗೆ ಹೇಳಿ ಮರಣ ಹೊಂದಿರುತ್ತಾನೆ ಎಂದು ನಡಿಯುತ್ತಾರೆ. ನನ್ನ ಮಾವನಾದ ದೊಡ್ಡ ಮುದುಕಪ್ಪ ಹಾಗೂ 1 ಮತ್ತು 2 ನೇ ಪ್ರತಿವಾದಿಗಳ ತಂದೆ ಹನುಮಂತಪ್ಪ ಇಬ್ಬರು ಅಣ್ಣತಮ್ಮಂದಿರು ಎಂದರೆ ನಿಜ. ನನ್ನ ಮಾವ ಹನುಮಂತಪ್ಪನಾಗಿರುತ್ತಾನೆ. ಆದರೆ ನನ್ನ ಮಾವನ ಅಣ್ಣನಾದ ದೊಡ್ಡ ಮುದುಕಪ್ಪನಿಗೂ ಸಹ ನಾನು ಮಾವ ಎಂದು ಕರೆಯುತ್ತೇನೆ. ನಾನು ಮದುವೆ ಆಗಿ ಬರುವುದಕ್ಕಿಂತ ಮೊದಲೇ ದೊಡ್ಡ ಮುದುಕಪ್ಪ ಮರಣ ಹೊಂದಿದ್ದ ಎಂದರೆ ನಿಜ. ಮೃತ ದೊಡ್ಡ ಮದುಕಪ್ಪ ಯಾವಾಗ ನಿಮ್ಮ ಹೆಸರಿನಲ್ಲಿ ದಾವಾ ಆಸ್ತಿಯನ್ನು ಮಾಡಬೇಕು ಎಂದು ಹೇಳಿರುತ್ತಾನೆ ಎಂದರೆ ಸಾಕ್ಷಿಯು ಮೃತ ದೊಡ್ಡ ಮುದುಕಪ್ಪ

ಸಾಯುವಾಗ ಮೊಮ್ಮಕ್ಕಳಿಗೆ ಹೇಳಿ ಮರಣ ಹೊಂದಿರುತ್ತಾನೆ ಎಂದು ನುಡಿಯುತ್ತಾರೆ. ಸಣ್ಣ ಮುದುಕಪ್ಪನಿಂದ ನಿಮಗೆ ದಾವಾ ಆಸ್ತಿ ಪ್ರಾಪ್ತವಾಗಿಲ್ಲ ಎಂದರೆ ಸಾಕ್ಷಿಯು ಸಣ್ಣ ಮದುಕಪ್ಪ ಕಾಣೆಯಾಗಿರುತ್ತಾನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಸುಮಾರು 3 ವರ್ಷಗಳ ಹಿಂದೆ ನನ್ನ ಹೆಸರಿನಲ್ಲಿ ಬಂದಿರುತ್ತದೆ. ನಿಮ್ಮ ಹೆಸರಿನಲ್ಲಿ ಆಸ್ತಿ ವರ್ಗಾವಣೆ ಆಗುವ ಸಮಯದಲ್ಲಿ ದಾವಾ ಆಸ್ತಿ ಖಾಲಿ ನಿವೇಶನ ಇತ್ತೋ ಅಥವಾ ಮನೆ ಇತ್ತೋ ಎಂದರೆ ಸಾಕ್ಷಿಯು ಆಸ್ತಿ ವರ್ಗಾವಣೆ ಆಗುವ ಪೂರ್ವದಲ್ಲಿಯೇ ಅಲ್ಲಿ ಮನೆ ಕಟ್ಟಿಸಿರುತ್ತೇವೆ ಎಂದು ನುಡಿಯುತ್ತಾರೆ. ಮನೆಯನ್ನು ನನ್ನ ಗಂಡ ಕಟ್ಟಿಸಿರುತ್ತಾನೆ. ನನ್ನ ಗಂಡ ಮನೆ ಕಟ್ಟಿಸುವಾಗ ಪಂಚಾಯಿತಿಯಿಂದ ಅನುಮತಿಯನ್ನು ಪಡೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಯಾರ ಹೆಸರಿನಲ್ಲಿ ಆಸ್ತಿ ಇರುತ್ತದೆಯೇ ಅಂತವರ ಹೆಸರಿನಲ್ಲಿ ಜನತಾ ಮನೆಯನ್ನು ಕೊಡುತ್ತಾರೆ ಎಂದರೆ ನಿಜ. ಯಾವ ವರ್ಷದಲ್ಲಿ ಜನತಾ ಮನೆ ಮಂಜೂರಾಗಿರುತ್ತದೆ ಎಂದರೆ ಗೊತ್ತಿಲ್ಲ. ಜನತಾ ಮನೆ ನಿರ್ಮಾಣ ಮಾಡಲು ಎಷ್ಟು ಹಣ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ, ಆದರೆ ನನ್ನ ಗಂಡನಿಗೆ ಗೊತ್ತು. ಜನತಾ ಮನೆ ನಿರ್ಮಾಣ ಮಾಡುವಾಗ ಮೂರು ಹಂತಗಳಲ್ಲಿ ಸರಕಾರದವರು ಬಂದು ಆ ಮನೆ ಮುಂದೆ ಭಾವಚಿತ್ರಗಳನ್ನು ಪಡೆದುಕೊಂಡು ಹೋಗುತ್ತಾರೆ ಎಂದರೆ ನಿಜ. ಆ ರೀತಿ ನಾನು ಸಹ ಭಾವಚಿತ್ರಗಳನ್ನು ತೆಗೆದುಕೊಂಡಿರುತ್ತೇನೆ. ಅವುಗಳನ್ನು ನನ್ನ ಗಂಡ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾನೆ. ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ, ಆದರೆ ನನ್ನ ಗಂಡನಿಗೆ ಮಾಹಿತಿ ಇರುತ್ತದೆ. ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳನ್ನು ನಾನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಣ್ಣ ಮುದುಕಪ್ಪ ಅಲಿಯಾಸ್ ರಂಗಪ್ಪ ಅವರಿಗೆ ಆರು ಜನ ಮಕ್ಕಳಿದ್ದು, ಅವರು ಜೀವಂತವಾಗಿರುತ್ತಾರೆ. ಅವರ ಹೆಂಡತಿ ಗಂಗಮ್ಮ ಸಹ ಜೀವಂತವಾಗಿರುತ್ತಾಳೆ. 4 ನೇ ಪ್ರತಿವಾದಿ ನನ್ನ ಅತ್ತೆ ಎಂದರೆ ನಿಜ. 4 ನೇ ಪ್ರತಿವಾದಿ ಮತ್ತು ಆಕೆಯ ದೊಡ್ಡ ಮಗ ಈರಣ್ಣ ಅವರು ಆಸ್ತಿಯಲ್ಲಿ ಭಾಗ ಕೇಳಿ ಹಿರಿಯ ಶ್ರೇಣಿ ನ್ಯಾಯಾಲಯ ಗಂಗಾವತಿಯಲ್ಲಿ ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಸ್ತಿ ಕೋರಿ ದಾವೆ ಸಲ್ಲಿಸಿದ ಬಗ್ಗೆ ನಮ್ಮ ಮನೆಯ ಗಂಡುಮಕ್ಕಳು, ಹೆಣ್ಣುಮಕ್ಕಳ ಮುಂದೆ

ಚರ್ಚೆ ಮಾಡುವುದಿಲ್ಲ. ದಾವಾ ಆಸ್ತಿಯನ್ನು ಸಣ್ಣ ಮುದುಕಪ್ಪನ ಹೆಂಡತಿ ಮಕ್ಕಳು ನನ್ನ ಹೆಸರಿಗೆ ಮಾಡಿಸಿಕೊಟ್ಟಿರುತ್ತಾರೆ. ನಮ್ಮ ಮನೆಗೆ ನಮ್ಮ ಮಾವನಾದ ಹನುಮಂತಪ್ಪನ ಹೆಸರಿನಲ್ಲಿ ವಿದ್ಯುಚ್ಛಕ್ತಿ ಸರಬರಾಜು ಇರುತ್ತದೆ. ಸದರಿ ಹನುಮಂತಪ್ಪ ಎಂದರೆ 4 ನೇ ಪ್ರತಿವಾದಿಯ ಗಂಡ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಕಾರಟಗಿ.
(ಸಂಚಾರಿ ನ್ಯಾಯಾಲಯ ಕಾರಟಗಿ)